<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**</u>

ಸಿ.ಸಿ. ನಂಃ 769/2015 ಸಿಡಬ್ಲೂ : 10 ಪಿಡಬ್ಲೂಃ 9

ಪ್ರಮಾಣವಚನ ಬೋಧಿಸಲಾಯಿತು ದಿಃ 27-10-2025

ಹೆಸರು : ಗೌರಿಶಂಕರ್

ತಂದೆ ಹೆಸರು : ಈಶ್ವರಪ್ಪ

ವಯಸ್ಸು : 59 ವರ್ಷ

ಉದ್ಯೋಗ : ಎ ಎಸ್ ಐ ಮುಧೋಳ್

ವಾಸಸ್ಥಳ : ಸೇಡಂ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಸನ್ 2014 ರಿಂದ ಸನ್ 2020 ವರೆಗೆ ಸೇಡಂ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ದಿಃ20-09-2015 ರಂದು ರಾತ್ರಿ 10-45 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಸರ್ಕಾರಿ ಆಸ್ಪತ್ರೆ ಸೇಡಂ ನಿಂದ ಎಂ ಎಲ್ ಸಿ ಬಂದಿತ್ತು. ಆಗ ನಾನು ಕೂಡಲೇ ಆಸ್ಪತ್ರೆಗೆ ಭೇಟಿ ನೀಡಿ ಚಾ ಸಾ 1 ರವರ ಹೇಳಿಕೆ ಪಡೆದುಕೊಂಡು ಮರಳಿ ಠಾಣೆಗೆ ಬಂದಿರುತ್ತೇನೆ. ಸದರಿ ದೂರಿನ ಆಧಾರದ ಮೇಲೆ ನಮ್ಮ ಠಾಣೆಯ ಗುನ್ನೆ ನಂಬರ 231/15 ನ್ನು ದಾಖಲಿಸಿಕೊಂಡು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು. ಸದರಿ ದೂರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ- 4(ಎ ಮತ್ತು ಬಿ) ಎಂದು ಗುರುತಿಸಲಾಯಿತು. ಪ್ರ.ವ. ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-5 ಎಂದು ಗುರುತಿಲಾಯಿತು. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾಃ 11 ಇವರಿಗೆ ವಹಿಸಿಕೊಟ್ಟೆನು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ ಃ

ನಾನು ಠಾಣಾ ಪ್ರಭಾರದಲ್ಲಿ ಇರುವ ಬಗ್ಗೆ ಯಾವುದೇ ದಾಖಲಾತಿಯನ್ನು ಸಲ್ಲಿಸಿಲ್ಲ. ನಾನು ದಿಃ20-09-2015 ರಂದು ರಾತ್ರಿ 10-45 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಸರ್ಕಾರಿ ಆಸ್ಪತ್ರೆ ಸೇಡಂ ನಿಂದ

ಎಂ ಎಲ್ ಸಿ ಬಂದಿತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆಗ ನಾನು ಕೂಡಲೇ ಆಸ್ಪತ್ರೆಗೆ ಭೇಟಿ ನೀಡಿ ಚಾ ಸಾ 1 ರವರ ಹೇಳಿಕೆ ಪಡೆದುಕೊಂಡು ಮರಳಿ ಠಾಣೆಗೆ ಬಂದಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ದೂರಿನ ಆಧಾರದ ಮೇಲೆ ನಮ್ಮ ಠಾಣೆಯ ಗುನ್ನೆ ನಂಬರ 231/15 ನ್ನು ದಾಖಲಿಸಿಕೊಂಡು ಪ್ರ.ವ. ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟೆನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾಃ 11 ಇವರಿಗೆ ವಹಿಸಿಕೊಟ್ಟೆನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**